2. ರಾಜ್ಯದಲ್ಲಿ ಹೆಚ್ಚಿನ ಕಬ್ಬು ಬೆಳೆದಿರುವುದರಿಂದ ಉಂಟಾಗಿರುವ ಪರಿಸ್ಥಿತಿ

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸುಮಾರು ಎರಡೂವರೆ ಮೂರು ತಿಂಗಳಿಂದ ಸರ್ಕಾರದ ಗಮನಕ್ಕೆ ತಂದರೂ ಹೆಚ್ಚುವರಿ ಕಬ್ಬಿನ ಬಗ್ಗೆ ಸರ್ಕಾರ ಏನೂ ಆಲೋಚನೆ ಮಾಡಲಿಲ್ಲ, ಕರ್ನಾಟಕದಲ್ಲಿ ಸುಮಾರು 2 ಕೋಟಿ 15 ಲಕ್ಷ ಟನ್ ಕಬ್ಬನ್ನು ರೈತರು ಬೆಳೆಯುತ್ತಿದ್ದೆವು. 30 ಕಾರ್ಖಾನೆಯಲ್ಲಿ 1ಕೋಟಿ 15 ಲಕ್ಷ ಟನ್ ಕಬ್ಬನ್ನು ಮಾತ್ರ ಅರೆಯುವ ಸಾಮರ್ಥ್ಯ ಇದೆ. ಇನ್ನು ಖಂಡಸಾರಿ ಗಾಣಗಳು 60-65 ಟನ್ ಕಬ್ಬು ಅರೆದು ಇನ್ನೂ 30-35 ಲಕ್ಷ ಟನ್ ಹೆಚ್ಚುವರಿ ಕಬ್ಬು ಉಳಿದುಕೊಳ್ಳುವ ಪರಿಸ್ಥಿತಿ ಕರ್ನಾಟಕದಲ್ಲಿ ಉದ್ಭವವಾಗಿದೆ. ಈಗಾಗಲೇ ಕಬ್ಬು 16-17 ತಿಂಗಳು ಮೀರಿ ಹೋಗಿರತಕ್ಕ ವ್ಯವಸ್ಥೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಸಕ್ಕರೆ ಮಂತ್ರಿಗಳು ಹೆಚ್ಚುವರಿ ಕಬ್ಬು ಯಾವಯಾವ ಕಾರ್ಖಾನೆಗೆ ಬೇಕು ಅಂಥ ಕಾರ್ಖಾನೆಯ ಮೀಟಿಂಗನ್ನು ತ್ವರಿತವಾಗಿ ಕರೆದು ಹೆಚ್ಚುವರಿ ಕಬ್ಬನ್ನು ಯಾವ ರೀತಿ ಡೈವರ್ಷನ್ ಮಾಡಬೇಕೆಂಬುದು ಸರ್ಕಾರದ ಜವಾಬ್ದಾರಿ. ತಾವು ದಯವಿಟ್ಟು ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಮೂರು ತಿಂಗಳಿಂದ ಇದರ ಬಗ್ಗೆ ಯಾವುದೇ ಒಂದು ಗಂಭೀರವಾಗಿ ಕೆಲಸ ಮಾಡಲಿಲ್ಲ, ನಾನು ಅತ್ಯಂತ ಜವಾಬ್ದಾರಿಯುತವಾಗಿ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಕ್ರಮ ಕೈಗೊಂಡರೆ ಸರ್ಕಾರಕ್ಕೂ ಗೌರವ ಬರುತ್ತದೆ, ಸಂಬಂಧಪಟ್ಟ ಇಲಾಖೆಗೂ ಗೌರವ ಬರುತ್ತದೆ. ಇವತ್ತು ಕರ್ನಾಟಕದಲ್ಲಿ ಕಬ್ಬಿನ ಬಗ್ಗೆ ಬೇಜಾವಾಬ್ದಾರಿತನ ಇಡಬಾರದು. ಇಲ್ಲದೆ ಇದ್ದರೇ ರೈತರು ಮೇನ್ ರೋಡಿಗೆ ಕಬ್ಬು ತಂದು ರಸ್ತೆಗೆ ಹಾಕಿಕೊಂಡು ಚಳುವಳಿ ಮಾಡತಕ್ಕ ಪರಿಸ್ಥಿತಿ ಸೃಷ್ಟಿಯಾಗುತ್ತಿಲ್ಲ, ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೇಳಿದೆ. ಆಂಧ್ರದಲ್ಲಿ ಇದ್ದಂಥ ಪರಿಸ್ಥಿತಿ ಇವತ್ತು ಕರ್ನಾಟಕದಲ್ಲಿ ಆಗುತ್ತದೆ. ಎಷ್ಟೂಂದು ಕಷ್ಟ ಪರಿಸ್ಥಿತಿಯಲ್ಲಿದ್ದಾರೆಂದರೆ ಅದನ್ನು ಹೇಳುವುದಕ್ಕೆ ಅಸಾಧ್ಯ. ದಯವಿಟ್ಟು ಸರ್ಕಾರ ಇದರ ಬಗ್ಗೆ ತಮ್ಮ ನಿಲುವನ್ನು ಹೇಳಬೇಕು. ಗಂಭೀರವಾಗಿ ತಾವು ಆಲೋಚನೆ ಮಾಡಿ ಹೆಚ್ಚುವರಿ ಕಬ್ಬಿನ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನು ಎಂಬುದನ್ನು ತಿಳಿಸಬೇಕು.

12.10 ಪಿ.ಎಂ.

ನಂತರ ಮೀಟಿಂಗ್ ಕರೆದರೆ, ಸಂಬಂಧಪಟ್ಟ ಶಾಸಕರನ್ನು ಕರೆದು ಯಾವ ರೀತಿ ಡೈವರ್ಶನ್ ಮಾಡಬಹುದು, ಯಾವ ರೀತಿ ಸರ್ಕಾರ ಬಗೆಹರಿಸಬಹುದು ಎಂಬ ಸಲಹೆಯನ್ನು ತೆಗೆದುಕೊಂಡು ಮಾಡಬೇಕು. ಈ ಕೆಲಸವನ್ನು ಬಹಳ ತ್ವರಿತವಾಗಿ ಮಾಡಬೇಕು. 3 ತಿಂಗಳಿನಿಂದ ಸರ್ಕಾರದ ಗಮನಕ್ಕೆ ತಂದರೂ, ಸರ್ಕಾರ ಕಬ್ಬು ಬೆಳೆಗಾರರ ಬಗ್ಗೆ ಬೇಜವಾಬ್ದಾರಿತನದಲ್ಲಿ ಇರುವುದನ್ನು ನೋಡಿದರೆ ಅದರ ಬಗ್ಗೆ ಸಮಂಜಸವಾದ ಉತ್ತರವನ್ನು ದಯವಿಟ್ಟು ಸಭಾಧ್ಯಕ್ಷರ ಮೂಲಕ ಕೊಟ್ಟರೆ ಅದು ಏನು ತೀರ್ಮಾನವೆಂದು ನಮಗೆ ಗೊತ್ತಾಗುತ್ತದೆ.

ಶ್ರೀ ಜೆ.ಹೆಚ್ ಪಟೇಲ್ (ಉಪಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ನಮ್ಮ ರಾಜ್ಯದಲ್ಲಿ ಕಬ್ಬು ಬೆಳೆಯತಕ್ಕಂಥ ಪ್ರದೇಶಗಳನ್ನು, ವಲಯಗಳನ್ನಾಗಿ ಹೇಳುವುದಾದರೆ ಮಂಡ್ಯ ಜಿಲ್ಲೆ ಮತ್ತು ಆ ವಿಭಾಗ, ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಮತ್ತು ಅದಕ್ಕೆ ಸಂಬಂಧಪಟ್ಟ ಹಾಗೆ ದಾವಣಗೆರೆ, ಹರಿಹರದ ಅಕ್ಕ ಪಕ್ಕ ಮತ್ತು ಬೆಳಗಾಂ ಜಿಲ್ಲೆ, ಈ ಮೂರು ವಲಯಗಳಲ್ಲಿರುವ ರೈತರ ಸಮಸ್ಯೆ ಏನು? ಕಬ್ಬಿನ ಸಮಸ್ಯೆ ಏನು? ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಸರ್ಕಾರಕ್ಕೂ ಗೊತ್ತಿದೆ. ಆದರೆ

ಇದನ್ನು ಒಂದು ಸರ್ವೇಸಾಮಾನ್ಯ ಫಾರ್ಮುಲ ಮಾಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಒಂದೊಂದು ಏರಿಯಾದಲ್ಲಿ ಇರತಕ್ಕಂಥ ಕಬ್ಬಿನ ಕಾರ್ಖಾನೆಗಳು ಅವರವರ ಲಾಭ ನಷ್ಟದ ಆಧಾರದ ಮೇಲೆ, ಅವರವರ ಶಕ್ತಿ ಆಧಾರದ ಮೇಲೆ ಇವತ್ತು ನಿಂತಿವೆ. ಸರ್ಕಾರ ಏನು ಮಾಡಿದೆಯೆಂದರೆ ಇಳುವಳಿ ಆಧಾರದ ಮೇಲೆ ಒಂದು ಬೆಲೆ ನಿಗದಿ ಮಾಡಿದೆ. ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ. ನಾವು ಈಗ 8.5 ಶುಗರ್ ರಿಕವರಿ ಇದ್ದರೆ ಒಂದು ಟನ್‌ಗೆ ಇಷ್ಟು ಎಂದು ಮಾಡಬಹುದು. ಜಾಸ್ತಿ ಇದ್ದ ಕಡೆ ಇದು ಜಾಸ್ತಿಯಾಗಬಹುದು. ಬೆಳಗಾಂ ಜಿಲ್ಲೆಯವರಿಗೆ ಗೊತ್ತಿದೆ ಅಲ್ಲಿ ಜಾಸ್ತಿ ಇದೆ ಎಂದರೆ 12 ಪರ್ಸೆಂಟ್ ರಿಕವರಿ ಇದೆಯೆಂದು. ಆದ್ದರಿಂದ ಮಾನ್ಯ ಸದಸ್ಯರಿಗೆ ನಾನು ಹೇಳುವುದು ಇಷ್ಟೆ. ಎಲ್ಲಿ ಹೆಚ್ಚುವರಿ ದಾಸ್ತಾನು ಕಬ್ಬು ಇದೆ, ಈ ಹೆಚ್ಚುವರಿ ಕಬ್ಬು ಎಲ್ಲಾ ಈಗಾಗಲೇ ತಮಿಳುನಾಡಿಗೆ ಹೋಗಿದೆ, ಮಹರಾಷ್ಟ್ರಕ್ಕೆ ಹೋಗುತ್ತದೆ. ಇದನ್ನು ಸರ್ಕಾರ ನಿರ್ವಹಿಸುವುದು ಬಹಳ ಕಷ್ಟವಾಗುತ್ತದೆ. ಆದರೆ ನಾವು ಏನು ಹೇಳಬಹುದೆಂದರೆ, ನಾವು ಕಬ್ಬನ್ನು ಒಟ್ಟಿಗೆ ಹೊರಗಡೆಗೆ ಹೋಗುವುದಕ್ಕೆ ಬಿಡುವ ಹಾಗಿಲ್ಲ. ಹೊರಗಡೆ ಹೋಗುವುದಕ್ಕೆ ಅನುಮತಿ ಕೊಡುವುದಕ್ಕೆ ಯಾವ ಯಾವ ಏರಿಯಾದಿಂದ ಎಷ್ಟೆಷ್ಟು ಕಬ್ಬನ್ನು ಕೊಡಬಹುದು ಎನ್ನುವುದನ್ನು ಸರ್ಕಾರ ತೀರ್ಮಾನ ಮಾಡುತ್ತದೆ. ಇದು ಮಾನ್ಯ ಸದಸ್ಯರಿಗೂ ಕೂಡ ಗೊತ್ತಿದೆ. ಮಂಡ್ಯದಲ್ಲಿ ಹೆಚ್ಚುವರಿ ಕಬ್ಬು ಇದ್ದರೆ ಎಲ್ಲಿಗೆ ಹೋಗಬೇಕು? ಬೆಳಗಾಂ ಜಿಲ್ಲೆಯಲ್ಲಿ ಹೆಚ್ಚುವರಿ ಕಬ್ಬು ಇದ್ದರೆ ಎಲ್ಲಿಗೆ ಹೋಗಬೇಕು ಇದಕ್ಕೆ ಒಂದು ಸಭೆಯನ್ನು ಕರೆದು ವಿಚಾರಿಸೋಣ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಇಲ್ಲ, ಇಲ್ಲ, ನಾನು ದರದ ಬಗ್ಗೆ ತಮಗೆ ಪ್ರಶ್ನೆ ಮಾಡಲಿಲ್ಲ. ಬಹಳ ತ್ವರಿತವಾಗಿ ಮೀಟಿಂಗ್ ಕರೆಯಬೇಕು. ಈಗಾಗಲೇ ಎರಡೂವರೆ ಮೂರು ತಿಂಗಳಾಗಿದೆ. ಕಬ್ಬಿಗೆ ಆಗಲೇ 17 ತಿಂಗಳು ಆಗಿದೆ.

ಶ್ರೀ ಹೆಚ್.ಕೆ. ಪಟೇಲ್ : ಆಗಬಹುದು. ಮೀಟಿಂಗ್ ಕರೆಯಬಹುದು.

GANAPATHY PROCESSION IN BELGAUM

Sri B.I. PATIL : Mr. Speaker Sir, for the last 20 years the Ganapathy procession was being taken in Belgaum.....

Mr. SPEAKER : What is the problem? You have already told yesterday.

Sri B.I. PATIL : The Deputy Commissioner has agian issued a circular proposing new route for the Ganapathy Procession. This will cause law and order problem since the original route has been deviated. I want an assurance from the Hon'ble Minister to retain the Original route.

(The Hon'ble Member staged a Dharana in the Well of the House).

Mr. SPEAKER : I am appealing to you please come back to your seat. Assurance will be given. You come to my chambers. Don't you trust me? You are such a good friend of mine. You please come back to your seat.

(At this satge the Hon'ble Member withdrew from the well)

Mr. SPEAKER : The Hon. member is a gentleman and he has agreed with suggestion of the Chair.

VIII-F-8